ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಜೋಡಿ ಕುತಾಂಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ನವಂಬರು ಮಾಹೆ 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫ್ಸೀಲ್ ಬಗ್ಗೆ ಸ|| 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 821ನೆ ನಂಬರ್ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಗೆ ಸೇರಿದ ಜೋಡಿ ದೊಂಮಲೂರು ಮತ್ತು ಪುರ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸಬ್ ಡಿವೀಜ್ ಆಫಿಸರವರ ರೂಬರೂಬು 1909ನೆ ಇಸವಿ ನವಂಬರು 17 ಮತ್ತು 18ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫಶೀಲ್ ಬಗ್ಗೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 822—823ನೆ ನಂಬರು ಪೇಜು ನೋಡತಕ್ಕದ್ದು.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಕಾಯಂಗುತ್ತಾ ಶೆಟ್ಟಿಗಾನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರ್ ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫಶೀಲುಗಳ ಬಗ್ಗೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮುಕ್ರಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 823—824ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ಶ್ಯಾಮಣ್ಣ,
ಛಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರವರ ಆಫೀಸುನಿಂದ—

ಪ್ರಕಟನೆ.

ತಾರೀಖು 20ನೆ ಅಕ್ಟೋಬರ್ 1909.

ಪೊಲೀಸ್ ಇನ್ಸ್‌ಪೆಕ್ಟರಾಗಿ ಇದ್ದು ಹಾಲೀ ನ್ಯೂತಪಟ್ಟು ಇರುವ ಮಹಮ್ಮದ್‌ಹುಸೇ ಎಂಬುವರಿಂದ ಸದರಿಯವರ ಬಾಬು ತು ಸಾಲಗಳಿಗಾಗಿ ವಸೂಲಾದ ಮೊಬಲಗು ಹನ್ನೆರಡು ರೂಪಾಯಿ ನಾಲ್ಕು ಆಣೆ (12—4—0) ಗಳು ನಮ್ಮ ಆಫೀಸಿನಲ್ಲಿ ಸಿಂ. ತು ಇರುತ್ತೆ. ಆದ್ದರಿಂದ ಈ ಪ್ರಕಟನೆಯ ತಾರೀಖು ಲಾಗಾಯಿತು ಆರು ತಿಂಗಳೊಳಗಾಗಿ ಮೇಲ್ಕಂಡ ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಮಹಮ್ಮದ್ ಹುಸೇರ ವಾರಸ್ದಾರ್ರುಗಳಾಗಲೀ, ಅಥವಾ ಸಾಲಗಾರರೇ ಆಗಲೀ ಹಕ್ಕು ಸ್ಥಿರಪಡಿಸದೇ ಹೋದರೆ, ಸದರಿ ಮೊಬಲಗನ್ನು ಗೌರ್ನಮೆಂಟ್ ಜಮೆಗೆ ತೆಗದುಕೊಳ್ಳಲ್ಪಡುತ್ತೆಂತಾ ಇದರ ಮೂಲಕ ಎಲ್ಲರಿಗೂ ತಿಳಿಯಪಡಿಸಿ ಇದೆ.

ಎಂ. ಪಿ. ವಿಶ್ವನಾಥರಾವ್,
ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಸಾಗರ ತಾಲ್ಲೂಕಿನಲ್ಲಿ ಗೆರಸಪ್ಪಾ ಫಾಲ್ಸ್ ಬಳಿ ಇರುವ ಜೋಗಿನ ಟ್ರಾವಲರ್ಸ್ ಬಂಗ್ಲೆಯು ಸ|| 1909ನೆ ನವಂಬರು 1ರ ಲಾಗಾಯಿತು 27ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಿರುತ್ತಾಗಿ ಇದರಿಂದ ಸರ್ವ ಸ್ಸ ಜನರಿಗೆ ತಿಳಿಯಪಡಿಸಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಇದರಿಂದ ಸರ್ವಸ್ಸ ಜನರಿಗೆ ತಿಳಿಯಪಡಿಸುವದೇನಂದರೆ :—ಸಾಗರ ತಾಲ್ಲೂಕಿಗೆ ಸೇರಿದ ಸಾಗರ ಮತ್ತು ಅನಂತಪುರದಲ್ಲಿ ರುವ ಟ್ರಾವಲರ್ಸ್ ಬಂಗಲೆಗಳನ್ನು ಸ|| 1909ನೆ ಇಸವಿ ನವಂಬರು 13ರ ಲಾಗಾಯಿತು 25ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಲ್ಪಟ್ಟಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.